**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ 6491/2024 ಸಿ.ಡಬ್ಲ್ಯೂ –1 ಪಿ.ಡಬ್ಲ್ಯೂ -01

| | | |
|---|---|---|
| ಹೆಸರು | ಃ | ಜನಬಾಯಿ |
| ತಂದೆಃ ಗಂಡ | ಃ | ರಾಮಚಂದ್ರ |
| ವಯಸ್ಸು | ಃ | 70 ವರ್ಷ |
| ಉದ್ಯೋಗ | : | ಮನೆಗೆಲಸ |
| ವಾಸಸ್ಥಳ | ಃ | ಆಳಂದ |

ದಿನಾಂಕಃ 04.07.2025

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ ಅವರಿಂದ ಃ**

ಆರೋಪಿತರ ಪರಿಚಯ ಇರುತ್ತದೆ. ಚಾಸಾ 2 ನನ್ನ ಅಕ್ಕನ ಮಗ ಇರುತ್ತಾನೆ. ಚಾಸಾ-6 ನನ್ನ ತಂಗಿ ಇರುತ್ತಾಳೆ. ಚಾಸಾ-3 ಪರಿಚಯ ಇರುವುದಿಲ್ಲ. ಚಾಸಾ-4 ಮತ್ತು 5 ಪರಿಚಯ ಇರುತ್ತಾರೆ. ಸುಮಾರು 5-6 ತಿಂಗಳ ಹಿಂದೇ ಆರೋಪಿತರು ನಾನು ಹಣ ಕೇಳಲು ಹೋದಾಗ ಆ ಮನೆಗೆ ಬಂದು ನನಗೆ ಕೈ ತಿರುವಿ ಹೊಡೆದಿರುತ್ತಾರೆ. ನಂತರ ನಾನು ಆರೋಪಿತರ ವಿರುದ್ದ ದೂರನ್ನು ದಾಖಲಿಸಿರುತ್ತೇನೆ. ನನ್ನ ಜೊತೆ ಯಾರು ಇರುವುದಿಲ್ಲ, ನಾನು ಮನೆಯಲ್ಲಿ ಒಬ್ಬಳೇ ಇರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿಪಿ. 1 ಅಂತಾ ಗುರುತಿಸಲಾಯಿತು. ಪೋಲಿಸರು ದೂರು ನೀಡಿದ ನಂತರ ಮನೆಗೆ ಬಂದು ಪಂಚನಾಮೆಯನ್ನು ಮಾಡಿಕೊಂಡು ಹೋಗಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ನಾನು ಆರೋಪಿತರಿಗೆ ರೂ. 1,00,000/- ಹಣವನ್ನು ನೀಡಿರುತ್ತೇನೆ ಎಂದರೆ ಸರಿ. ದಿಃ ೧೫-02-2024 ರಂದು ರಾತ್ರಿ 8.00 ಗಂಟೆಗೆ ಘಟನೆ ನಡೆದಿರುತ್ತದೆ ಎಂದರೆ ಸರಿ. ಆರೋಪಿ ನಂಬರ 2 ನನಗೆ ಏ ರಂಡಿ ಪದೇ ಪದೇ ಹಣ ಕೇಳಲು ಬರುತ್ತಿ ಅಂತಾ ಅವಾಚ್ಯವಾಗಿ ಬೈದು ಕಪಾಳಿಗೆ

ಹೋಡಿದಿರುತ್ತಾಳೆ ಎಂದರೆ ಸರಿ. 1 ನೇ ಆರೋಪಿಯು ನನ್ನ ಎಡಗೈ ಹಿಡಿದು ತಿರುವಿ ನೂಕಿಸಿರುತ್ತಾನೆ ಎಂದರೆ ಸರಿ. ಜಗಳವನ್ನು ನೋಡಿ ಚಾಸಾ 4 ರವರು ಬಿಡಿಸಿರುತ್ತಾರೆ ಎಂದರೆ ಸರಿ. ನಂತರ ನಾನು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದು ತಡವಾಗಿ ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿ.

**<u>ಪಾಟೀ ಸವಾಲು ಆರೋಪಿತರ ಪರಃ ಶ್ರೀ. ಬಿ.ಐ.ಎಸ್ ವಕೀಲರಿಂದಃ</u>**

ಪ್ರಕರಣ ಆಗುವುದಕ್ಕಿಂತ ಮುಂಚೆ ನನ್ನ ಮತ್ತು ಆರೋಪಿತರ ನಡುವೆ ಸಂಬಂಧ ಚೆನ್ನಾಗಿ ಇತ್ತು ಎಂದರೆ ಸರಿ. ನನಗೆ ಘಟನೆ ನಡೆದ ದಿನಾಂಕ ಮತ್ತು ಸಮಯ ಹೇಳಲು ಬರುವುದಿಲ್ಲ. ನನಗೆ ದೂರನ್ನು ಓದಲು ಬರುವುದಿಲ್ಲ ಎಂದರೆ ಸರಿ. ದೂರಿನಲ್ಲಿ ಏನು ನಮೂದು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಪೋಲಿಸರು ಸಹಿ ಮಾಡು ಅಂತಾ ಹೇಳಿದ ಕಾರಣ ನಾನು ಸಹಿ ಮಾಡಿರುತ್ತೇನೆ. ನಾನು ದೂರಿನಲ್ಲಿ **1** ಲಕ್ಷ ಹಣವನ್ನು ಆರೋಪಿತರಿಗೆ ಕೊಟ್ಟಿರುತ್ತೇನೆ ಅಂತಾ ಬರೆಸಿರುತ್ತೇನೆ ಎಂದರೆ ಸರಿ. ನಾನು ಸರ್ಕಾರದಿಂದ ಬಂದ ಹಣವನ್ನು ಕೂಡಿಸಿ ಇಟ್ಟು ಬಂದ ಹಣದಿಂದ ಆರೋಪಿತರಿಗೆ ನೀಡಿರುತ್ತೇನೇ ಅಂತಾ ನಿಫಿ. ೧ ರಲ್ಲಿ ಬರೆಸಿದ್ದು ಯಾವ ಹಣ ಎಂದರೆ ಸಾಕ್ಷಿಯು ನಾನು ಮುಂಬೈಯಲ್ಲಿ ಇದ್ದಾಗ ಕೆಲಸ ಮಾಡಿ ದುಡಿದ ಹಣ ಮತ್ತು ಅಲ್ಲಿನ ಆಸ್ತಿಯನ್ನು ಮಾರಾಟ ಮಾಡಿ ಬಂದ ಹಣವನ್ನು ಆರೋಪಿತರಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿತರಿಗೆ ನಾನು ಹಣ ನೀಡಿದ ಬಗ್ಗೆ ದಾಖಲೆ ಇದ್ದು, ಅದರ ದಿನಾಂಕವನ್ನು ನನಗೆ ಹೇಳಲು ಬರುವುದಿಲ್ಲ. ನಾನು ಸದರಿ ದಾಖಲೆಯನ್ನು ದೂರು ನೀಡುವಾಗ ಪೋಲಿಸರಿಗೆ ನೀಡಿರುವುದಿಲ್ಲ. ದಿಃ 15-02-2024 ರಂದು ರಾತ್ರಿ 8.00 ಗಂಟೆಗೆ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿ ನಂಬರ 2 ನನಗೆ ಏ ರಂಡಿ ಪದೇ ಪದೇ ಹಣ ಕೇಳಲು ಬರುತ್ತಿ ಅಂತಾ ಅವಾಚ್ಯವಾಗಿ ಬೈದಿರುವುದಿಲ್ಲ ಮತ್ತು ಕಪಾಳಿಗೆ ಹೋಡಿದಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯು ನನ್ನ ಎಡಗೈ ಹಿಡಿದು ತಿರುವಿ ನೂಕಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪತರ ಮಧ್ಯೆ ಯಾವುದೇ ಹಣದ ವ್ಯವಹಾರ ಆಗಿರುವುದಿಲ್ಲ, ಅವರು ನಮ್ಮ ಮನೆಗೆ ಬಂದು ನನ್ನ ಜೊತೆ ಜಗಳ ಮಾಡಿರುವುದಿಲ್ಲ, ಆರೋಪಿತರ ವಿರುದ್ದ ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಜಗಳ ಎಷ್ಟು ಗಂಟೆಯವರೆಗೆ ಆಯಿತು ಅಂತಾ ನನಗೆ ಹೇಳಲು ಬರುವುದಿಲ್ಲ. ಜಗಳ ಆಗಿರುವುದಿಲ್ಲ, ಆದಕಾರಣ ಚಾಸಾ 4 ರವರು ಜಗಳವನ್ನು ಬಿಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಜಗಳ ಆದ ನಂತರ

ನಾನು ಪೋಲಿಸ್ ಠಾಣೆಗೆ ಹೋಗಿರುತ್ತೇನೆ. ನನ್ನನ್ನು ಚಾಸಾ 4 ರವರು ಪೋಲಿಸ್ ಠಾಣೆಗೆ ಕರೆದುಕೊಂಡು ಹೋಗಿರುತ್ತಾರೆ. ನಾನು ಠಾಣೆಗೆ ಎಷ್ಟು ಗಂಟೆಗೆ ಹೋಗಿರುತ್ತೆನೆ ನನ್ನಿಂದ ಹೇಳಲು ಬರುವುದಿಲ್ಲ. ಠಾಣೆಯಿಂದ ನಾನು ಎಷ್ಟು ಗಂಟೆಗೆ ಬಂದೆ ಎಂದರೆ ನಾನು ಆಸ್ಪತ್ರೆಗೆ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿತರು ಯಾವುದೇ ತಪ್ಪು ಮಾಡದೇ ಇದ್ದರೂ ಬೇರೆಯವರ ಮಾತು ಕೇಳಿ ಸುಳ್ಳು ದೂರ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.ಆಳಂದ